




# ಪ್ರಮುಖ ಸೈಬರ್ ಅಪರಾಧಗಳ ಸ್ಥೂಲ ಪರಿಚಯ

**1. ಫಿಶಿಂಗ್:** ಇದು ಅತ್ಯಂತ ಸಾಮಾನ್ಯವಾದ ಸೈಬರ್ ವಂಚನೆಯ ವಿಧಾನ. ವಂಚಕರು ಬ್ಯಾಂಕ್‌ಗಳು, ಸರ್ಕಾರಿ ಸಂಸ್ಥೆಗಳು ಅಥವಾ ಇ–ಕಾಮರ್ಸ್ ಕಂಪನಿಗಳಂತಹ ವಿಶ್ವಾಸಾರ್ಹ ಮೂಲಗಳ ಸೋಗಿನಲ್ಲಿ ನಕಲಿ ಇ–ಮೇಲ್, ಎಸ್‌ಎಂಎಸ್ ಅಥವಾ ಕರೆಗಳನ್ನು ಕಳುಹಿಸುತ್ತಾರೆ. 'ನಿಮ್ಮ ಖಾತೆ ಬ್ಲಾಕ್ ಆಗಿದೆ', 'ನಿಮಗೆ ಲಾಟರಿ ಬಂದಿದೆ', 'ನಿಮ್ಮ ಪ್ಯಾನ್ ಕಾರ್ಡ್ ನವೀಕರಿಸಿ' ಎಂದು ಹೇಳಿ ಒಂದು ಲಿಂಕ್ ಅನ್ನು ಕಳುಹಿಸುತ್ತಾರೆ. ಆ ಲಿಂಕ್ ಕ್ಲಿಕ್ ಮಾಡಿದರೆ, ನಿಮ್ಮ ಸಾಧನವನ್ನು ಹ್ಯಾಕ್ ಮಾಡುತ್ತಾರೆ ಅಥವಾ ಅದು ನಕಲಿ ವೆಬ್‌ಸೈಟ್‌ಗೆ ಕರೆದೊಯ್ಯುತ್ತದೆ ಮತ್ತು ಅಲ್ಲಿ ವೈಯಕ್ತಿಕ ಮಾಹಿತಿ, ಬ್ಯಾಂಕ್ ಖಾತೆ ವಿವರಗಳು, ಪಾಸ್‌ವರ್ಡ್, ಅಥವಾ ಒಟಿಪಿ ನೀಡುವಂತೆ ಕೇಳುತ್ತಾರೆ. ಅದನ್ನು ಬಳಸಿ ನಿಮನ್ನು ವಂಚಿಸುತ್ತಾರೆ.

**2. ಆನ್‌ಲೈನ್ ಹಗರಣಗಳು:** ಆನ್‌ಲೈನ್‌ನಲ್ಲಿ ನಕಲಿ ಜಾಹೀರಾತುಗಳು, ಉದ್ಯೋಗದ ಆಮಿಷಗಳು, ಆಕರ್ಷಕ ಹೂಡಿಕೆ ಯೋಜನೆಗಳು ಮತ್ತು ಬೃಹತ್ ರಿಯಾಯಿತಿಗಳನ್ನು ನೀಡಿ ಹಣವನ್ನು ಅಥವಾ ನೀವು ನೀಡುವ ಕ್ರೆಡಿಟ್/ಡೆಬಿಟ್ ಕಾರ್ಡ್ ಮಾಹಿತಿಯನ್ನು ಪಡೆದು ವಂಚಿಸುವುದು ಸಾಮಾನ್ಯವಾಗಿವೆ.

**3. ಸಾಮಾಜಿಕ ಮಾಧ್ಯಮ ಅಪರಾಧಗಳು:** ಸೈಬರ್ ವಂಚಕರು ನಕಲಿ ಪ್ರೊಫೈಲ್‌ಗಳನ್ನು ರಚಿಸಿ, ನಿಮ್ಮ ಸ್ನೇಹಿತರಂತೆ ನಟಿಸಿ ಹಣ ಕೇಳುವುದು, ಕಿರುಕುಳ ನೀಡುವುದು, ಅಥವಾ ನಿಮ್ಮ ವೈಯಕ್ತಿಕ ಮಾಹಿತಿ ಕದಿಯುವುದು ಸಾಮಾನ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ, ಡೀಪ್‌ಫೇಕ್ (Deepfake) ತಂತ್ರಜ್ಞಾನ ಬಳಸಿ ನಕಲಿ ವಿಡಿಯೊಗಳನ್ನು ಸೃಷ್ಟಿಸಿ ಬೆದರಿಕೆ ಹಾಕುವ ಪ್ರಕರಣಗಳೂ ಹೆಚ್ಚುತ್ತಿವೆ.

